<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ.</u>

ಸಾಕ್ಷಿಯನ್ನು ಮಧ್ಯಂತರ ಅರ್ಜಿಯ ಮೇಲೆ ಮಾಡಲಾದ ಆದೇಶದನ್ವಯ ಪುನಃ ಕರೆಯಿಸಿ
ಪ್ರಮಾಣ ವಚನ ಮಾಡಲಾದ ದಿ : 01.02.2023
ಪಾಟಿ ಸವಾಲು : 5 ನೇ ಪ್ರತಿವಾದಿ ಪರ ಶ್ರೀ ಎನ್.ಎಸ್ ವಕೀಲರಿಂದ

ಶಂಕರೇಗೌಡ ಎನ್ನುವವರು ನನ್ನ ಮಾವನಾಗಬೇಕು ಎಂದರೆ ಸರಿ. 2 ನೇ ಪ್ರತಿವಾದಿ ದೇವಮ್ಮ ನನ್ನ ಅತ್ತೆಯಾಗಬೇಕು ಎಂದರೆ ಸರಿ. ಶಂಕರೇಗೌಡರವರಿಗೆ 4 ಜನ ಗಂಡು ಮಕ್ಕಳು ಹಾಗೂ 3 ಜನ ಹೆಣ್ಣು ಮಕ್ಕಳು ಇರುತ್ತಾರೆ ಎಂದರೆ ಸರಿ. ಮೃತ ಬ್ರಹ್ಮಲಿಂಗೇಗೌಡ ನನ್ನ ಗಂಡ ಎಂದರೆ ಸರಿ. ಬ್ರಹ್ಮಲಿಂಗೇಗೌಡರಿಗೆ ನಾನು ಮತ್ತು ಸಾಕಮ್ಮ ರವರು ಇಬ್ಬರು ಹೆಂಡತಿಯರು ಎಂದರೆ ಸರಿ.

ನನ್ನ ಮಕ್ಕಳು ಇರಲಿಲ್ಲ ಎಂದರೆ ಸಾಕ್ಷಿಯು ಇಬ್ಬರು ಮಕ್ಕಳು ಇದ್ದರು ಅವರು ಈಗ ಮೃತರಾಗಿದ್ದಾರೆ ಎಂದು ನುಡಿಯುತ್ತಾರೆ. ಸಾಕಮ್ಮನವರಿಗೆ ಗೋಪಾಲ ಮತ್ತು ಶಂಕರ ಎನ್ನುವ ಇಬ್ಬರು ಮಕ್ಕಳು ಎಂದರೆ ಸರಿ. ಅವರಲ್ಲಿ ಶಂಕರ್ ಎನ್ನುವವರು ಮೃತರಾಗಿದ್ದು ಅವರ ಹೆಂಡತಿ ಮತ್ತು ಮಕ್ಕಳು ಇದ್ದಾರೆ ಎಂದರೆ ಸರಿ. ಶಂಕರ್ ರವರ ಹೆಂಡತಿ ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರಾಗಿ ಮಾಡಿಲ್ಲ ಎಂದರೆ ಸುಳ್ಳು.

ದಾವಾ ಐಟಂ.1 ಹೊರತುಪಡಿಸಿ ಮಿಕ್ಕೆಲ್ಲಾ ಆಸ್ತಿಗಳು ಶಂಕರೇಗೌಡರ ಸ್ವಯಾರ್ಜಿತ ಆಸ್ತಿಗಳು ಎಂದರೆ ಸುಳ್ಳು. ದಾವಾ ಸ್ವತ್ತುಗಳಲ್ಲಿ ಕೇವಲ ಒಂದು ಬೆಳೆಯನ್ನು ಸಹ ಬೆಳೆಯಬಹುದು 2-3 ಬೆಳೆಗಳನ್ನು ಬೆಳೆಯಲು ಆಗುವುದಿಲ್ಲ ಆದರೂ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಶಂಕರೇಗೌಡರು ಮೃತರಾದ ಮೇಲೆ ಒಟ್ಟು ಕುಟುಂಬದ ವ್ಯವಹಾರಗಳನ್ನು ಶಂಕರೇಗೌಡನ ಹೆಂಡತಿ ದೇವಮ್ಮ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ.

ದಿಃ 05.061989 ರಲ್ಲಿ ಶಂಕರೇಗೌಡರು ತಮ್ಮ ಜೀವಿತಾವಧಿಯಲ್ಲಿ ಮರಣಶಾಸನವನ್ನು ದಾವಾ ಸ್ವತ್ತುಗಳ ಸಂಬಂಧ ಮಾಡಿಟ್ಟಿದ್ದರು ಎಂದರೆ ಸುಳ್ಳು. ಸದರಿ ದಿನಾಂಕದಂದು ಶಂಕರೇಗೌಡರು ಗೋಪಾಲೇಗೌಡ, ಸ್ವಾಮಿಗೌಡ, ಶಿವಲಿಂಗೇಗೌಡ, ದೇವಮ್ಮ ನವರಿಗೆ ಪ್ರತ್ಯೇಕ ಮರಣಶಾಸನಗಳನ್ನು ಮಾಡಿಟ್ಟಿದ್ದರು ಎಂದರೆ ಸುಳ್ಳು. ಮರಣಶಾಸನದಂತೆ ಶಂಕರೇಗೌಡರು ಮೃತಪಟ್ಟ ನಂತರ ತನಗೆ ಬಂದ ಆಸ್ತಿಗಳಲ್ಲಿ ಗೋಪಾಲೇಗೌಡ,

ಸ್ವಾಮಿಗೌಡ, ಶಿವಲಿಂಗೇಗೌಡ, ದೇವಮ್ಮ ರವರು ಪ್ರತ್ಯೇಕ ಸ್ವಾಧೀನಾನುಭವ ಹೊಂದಿ ಆಸ್ತಿಗಳನ್ನು ಅನುಭವಿಸುತ್ತಿದ್ದಾರೆ ಎಂದರೆ ಸುಳ್ಳು.

ಗೋಪಾಲೇಗೌಡ ಮತ್ತು ಸ್ವಾಮಿಗೌಡ ಮೃತರಾದ ಮೇಲೆ ಅವರಿಗೆ ಮರಣಶಾಸನದ ಮೂಲಕ ಬಂದಂತಹ ಆಸ್ತಿಗಳ ಸಂಬಂಧ ಅವರ ಹೆಂಡತಿ ಮಕ್ಕಳು ಖಾತೆ ಬದಲಾವಣೆ ಮಾಡಿಕೊಂಡು ಸ್ವಾಧೀನಾನುಭವ ಹೊಂದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾಸ್ತಿಗಳ ಪೈಕಿ 1 ಸ್ವತ್ತಿನಲ್ಲಿ 10 ಗುಂಟೆ ವಿಸ್ತೀರ್ಣದಲ್ಲಿ ಮಾತ್ರ ನಾನು ವ್ಯವಸಾಯ ಮಾಡುತ್ತಿದ್ದೇನೆ. ದಾವಾ ಐಟಂ.5 ನೇ ಸ್ವತ್ತಿನಲ್ಲಿರುವ ಮನೆಯ ಅರ್ಧ ಭಾಗದಲ್ಲಿ ನಾನು ವಾಸಿಸುತ್ತಿದ್ದೇನೆ ಎಂದರೆ ಸರಿ. ದಾವಾ ಐಟಂ.5 ನೇ ಸ್ವತ್ತಿನಲ್ಲಿರುವ ಉಳಿದರ್ಧ ವಿಸ್ತೀರ್ಣದಲ್ಲಿ 2 ನೇ ಪ್ರತಿವಾದಿ ದೇವಮ್ಮ ವಾಸಿಸುತ್ತಿದ್ದಾರೆ ಎಂದರೆ ಸರಿ.

ಈ ಕೇಸು ದಾಖಲು ಮಾಡಿದನಂತರ ನಾನು ವಾಸ ಮಾಡುತ್ತಿರುವ ಮನೆಯ ಖಾತೆಯನ್ನು ನನ್ನ ಹೆಸರಿಗೆ ಬದಲಾವಣೆ ಮಾಡಿಸಿಕೊಂಡಿದ್ದೇನೆ ಎಂದರೆ ಸರಿ. ನನ್ನ ಗಂಡ ಬ್ರಹ್ಮಲಿಂಗೇಗೌಡರು ಮೃತರಾದ ಮೇಲೆ ನಮ್ಮ ಕುಟುಂಬದ ವ್ಯವಹಾರಗಳನ್ನು ನಾನೇ ನೋಡಿಕೊಳ್ಳುತ್ತಿದ್ದೇನು ಎಂದರೆ ಸುಳ್ಳು. ನಮ್ಮ ಮನೆಯ ವ್ಯವಹಾರಗಳನ್ನು ಶಿವಲಿಂಗೇಗೌಡರು ಯಾವತ್ತು ನೋಡಿಕೊಂಡಿಲ್ಲ ಎಂದರೆ ಸುಳ್ಳು.

ದಾವಾ ಐಟಂ.2 ನೇ ಸ್ವತ್ತಿನಲ್ಲಿ 6 ನೇ ಪ್ರತಿವಾದಿ ಚಂದ್ರಕಲಾ 14 ಗುಂಟೆ ವಿಸ್ತೀರ್ಣದ ಆಸ್ತಿಯಲ್ಲಿ ವ್ಯವಸಾಯ ಮಾಡಿಸುತ್ತಿದ್ದಾರೆ ಎಂದರೆ ಸರಿ. ದಾವಾ ಐಟಂ.3 ರ ಸ್ವತ್ತಿನಲ್ಲಿ 10 ಗುಂಟೆ ವಿಸ್ತೀರ್ಣದ ಸ್ವತ್ತನ್ನು ಶಿವಲಿಂಗೇಗೌಡ ಹಾಗೂ 20 ಗುಂಟೆ ವಿಸ್ತೀರ್ಣದ ಸ್ವತ್ತನ್ನು 3 ನೇ ಪ್ರತಿವಾದಿ ಪದ್ಮಮ್ಮ ವ್ಯವಸಾಯ ಮಾಡಿಸುತ್ತಿದ್ದಾರೆ ಎಂದರೆ ಸರಿ. ದಾವಾ ಐಟಂ.4 ರಲ್ಲಿ ಪ್ರತಿವಾದಿ-6 28 ಗುಂಟೆ ಸ್ವಾಧೀನದಲ್ಲಿ ಹಾಗೂ ಐಟಂ.5 ನೇ ಸ್ವತ್ತಿನಲ್ಲಿ 3 ನೇ ಪ್ರತಿವಾದಿ ಪದ್ಮಮ್ಮ ಸ್ವಾಧೀನ ಹೊಂದಿದ್ದಾರೆ ಎಂದರೆ ಸರಿ.

ದಾವಾ ಐಟಂ.6 ರ ಮನೆಯಲ್ಲಿ ಅರ್ಧ ಭಾಗ ಚಂದ್ರಕಲಾ ಹಾಗೂ ಇನ್ನೂ ಅರ್ಧ ಭಾಗದಲ್ಲಿ ಶಿವಲಿಂಗೇಗೌಡರು ವಾಸಿಸುತ್ತಿದ್ದಾರೆ ಎಂದರೆ ಸುಳ್ಳು. ದಾವಾ ಐಟಂ.1 ಹೊರತುಪಡಿಸಿ ಮಿಕ್ಕೆಲ್ಲಾ ದಾವಾ ಸ್ವತ್ತು ಶಂಕರೇಗೌಡರ ಸ್ವಯಾರ್ಜಿತ ಸ್ವತ್ತು ಆದ ಕಾರಣ ದಾವಾ ಐಟಂ.1 ಹೊರತುಪಡಿಸಿ ನನಗೆ ಇನ್ನೂಳಿದ ದಾವಾ ಸ್ವತ್ತುಗಳಲ್ಲಿ ಯಾವುದೇ ಹಿಸ್ಸೆಯ ಹಕ್ಕು ಇಲ್ಲವೆಂದರೆ ಸುಳ್ಳು.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.